# ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು-560056

ವಿಷಯ: ದಿನಾಂಕ 08.02.2024ರ ಕಛೇರಿ ಆದೇಶವನ್ನು ಹಿಂಪಡೆಯುವ ಬಗ್ಗೆ.

ಉಲ್ಲೇಖ: 1. ದಿನಾಂಕ 10.11.2023ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿ.
2. ವಿ.ವಿ.ಆದೇಶ ಸಂಖ್ಯೆ:ಸಿಬ್ಬಂದಿ-2/ಇ9/ಅ.ಉ/ತೆಲುಗು/2023-24, ದಿನಾಂಕ 08.02.2024.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 18.03.2024.

* * * **

**ಸಂಖ್ಯೆ: ಸಿಬ್ಬಂದಿ-2/ಇ9/ಅ.ಉ/ತೆಲುಗು/2023-24 ಬೆಂಗಳೂರು ದಿನಾಂಕ: 27.03.2024**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:10.11.2023ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಕೆಲವು ವಿಭಾಗಕ್ಕೆ 2023-24ನೇ ಸಾಲಿಗೆ 10 ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುವುದರಿಂದ, ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಅವಕಾಶವಿರುವುದಿಲ್ಲ ಹಾಗೂ ಅಂತಹ ವಿಭಾಗಗಳಲ್ಲಿ ಲಭ್ಯವಿರುವ ಸಂಶೋಧನಾ ವಿದ್ಯಾರ್ಥಿಗಳಿಂದ ಕಾರ್ಯಭಾರವನ್ನು ಸರಿದೂಗಿಸಿಕೊಳ್ಳಬೇಕೆಂದು ದಿನಾಂಕ : 08.02.2024ರ ಕಛೇರಿ ಆದೇಶದಲ್ಲಿ ತಿಳಿಸಲಾಗಿತ್ತು. ಆದರೆ ದಿನಾಂಕ: 18.03.2024ರಲ್ಲಿ ಮಾನ್ಯ ಕುಲಪತಿಗಳು ದಿನಾಂಕ:10.11.2023ರ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಮುಂದಿನ ಶೈಕ್ಷಣಿಕ ಸಾಲಿನಿಂದ ಕಾರ್ಯಗತಗೊಳಿಸುವಂತೆ ಆದೇಶಿಸಿರುವ ಹಿನ್ನೆಲೆಯಲ್ಲಿ ದಿನಾಂಕ : 08.02.2024ರಂದು ಹೊರಡಿಸಲಾದ ಈ ಕಛೇರಿ ಆದೇಶವನ್ನು ಹಿಂಪಡೆಯಲಾಗಿದ್ದು, 2024-25ನೇ ಶೈಕ್ಷಣಿಕ ಸಾಲಿನಿಂದ ಉಲ್ಲೇಖ (1) ರ ಸಿಂಡಿಕೇಟ್ ನಿರ್ಣಯವನ್ನು ಜಾರಿಗೊಳಿಸಲು ಆದೇಶಿಸಲಾಗಿದೆ.

ಆದೇಶಾನುಸಾರ
30/3/24
ಕುಲಸಚಿವರು

ಗೆ,

ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳು,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು.

**ಪ್ರತಿಗಳು:-**

1. ಮುಖ್ಯಸ್ಥರು, ತೆಲುಗು ವಿಭಾಗ,ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು,-ಸೂಕ್ತ ಕ್ರಮಕ್ಕಾಗಿ
2. ಮುಖ್ಯಸ್ಥರು, ಸಂಸ್ಕೃತ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು,-ಸೂಕ್ತ ಕ್ರಮಕ್ಕಾಗಿ
3. ವಿತ್ತಾಧಿಕಾರಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು,
4. ಕಛೇರಿ ಪ್ರತಿ.